**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಭಟ್ಕಳ**

**ಫೌಜುದಾರಿ ಪ್ರಕರಣ ಸಂಖ್ಯೆ 149/2022**

**ಫಿರ್ಯಾದಿಃ** ಸರಕಾರದ ಪರವಾಗಿ
ಪೋಲಿಸ್ ಉಪ-ನಿರೀಕ್ಷಕರು,
ಮುರ್ಡೇಶ್ವರ ಪೋಲಿಸ್ ಠಾಣೆ.

**- ವಿರುದ್ಧ -**

**ಆರೋಪಿ :** 2) ಮುಕದ್ದರ್ ಲಲ್ಲಾನ್ ನಿಷಾದ್,
ವಯಸ್ಸು 19 ವರ್ಷ,
ಉದ್ಯೋಗಃ ಪೇಂಟರ್,
ವಾಸಃ ನಂ.226, ಮುರ್ನಪೊರ್ಡಗಂಜ್,
ಅಲಹಾಬಾದ್, ಉತ್ತರಪ್ರದೇಶ.

# ದೋಷಾರೋಪಣೆ

ಶ್ರೀ. ಕುರಣಿ ಕಾಂತ ಠಾಕು, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿನ್ನ ಮೇಲೆ ಈ ಕೆಳಕಂಡ ದೋಷಾರೋಪಣೆಗಳನ್ನು ಹೊರೆಸುತ್ತಿದ್ದೇನೆ.

ಭಟ್ಕಳ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಮುರ್ಡೇಶ್ವರ ಪೊಲೀಸ್ ಠಾಣಾ ಸರಹದ್ದಿನ ಮುರ್ಡೇಶ್ವರದ ರೈಲ್ವೆ ನಿಲ್ದಾಣದಲ್ಲಿ ದಿನಾಂಕ 28-11-2019 ರಂದು ಬೆಳಗ್ಗಿನ ಜಾವ 05-00 ಗಂಟೆಗೆ 2 ನೇ ಆರೋಪಿಯಾದ ನೀನು ಇತರೆ ಆರೋಪಿತರೊಂದಿಗೆ ಸೇರಿಕೊಂಡು ಸುಲಿಗೆ ಮಾಡುವ ಉದ್ದೇಶದಿಂದ ಮತ್ಸ್ಯಗಂಧ ಎಕ್ಸಪ್ರೆಸ್ ರೈಲ್ವೆ ನಂ. 12619 ನೇದರಲ್ಲಿ ಬಂದು, ರೈಲ್ವೆ ಕೋಚ್ ನಂ. ಎಸ್-2 ನೇದರಲ್ಲಿ ಮುಂಬಯಿಂದ ಉಡುಪಿಗೆ ಪ್ರಯಾಣಿಸುತ್ತಿದ್ದ ಪಿರ್ಯಾದಿಯವರ ರೂ.15,000/-ಬೆಲೆಬಾಳುವ ಸ್ಯಾಮ್‌ಸಂಗ್ ಕಂಪನಿಯ 01 ಮೊಬೈಲು, 119.93 ಗ್ರಾಂ ತೂಕದ ಅಜಮಾಸು ರೂ.4,22.960/- ಬೆಲೆಬಾಳುವ ಬಂಗಾರದ ಆಭರಣಗಳು, ರೂ.36,000/-

ನಗದು ಹಣವನ್ನು ವ್ಯಾನಿಟಿ ಬ್ಯಾಗಿನಲ್ಲಿ ಹಾಕಿ ತನ್ನ ಕೈಯಲ್ಲಿ ಇಟ್ಟುಕೊಂಡಿದ್ದಾಗ, 1 ನೇ ಆರೋಪಿತನು ಅದನ್ನು ಕಿತ್ತುಕೊಂಡು ರೈಲು ಹೊರಡುವಾಗ ತಕ್ಷಣ 2 ನೇ ಆರೋಪಿತನಾದ ನಿಮ್ಮ ಕೈಗೆ ನೀಡಿ ಚಲಿಸುವ ರೈಲಿನಿಂದ ಜಿಗಿದು ಓಡಿ ಹೋಗಿ ಸುಲಿಗೆ ಮಾಡಿದ ಹಣದಲ್ಲಿ ರೂ.1,800/–ನ್ನು ಖರ್ಚು ಮಾಡಿ, ಮುರ್ಡೇಶ್ವರದಿಂದ ಎನ್.ಡಬ್ಲ್ಯುಕೆ.ಆರ್.ಟಿ.ಸಿ ಬಸ್ ನಂ.ಕೆಎ–31/ಎಫ್–1255 ನೇದರಲ್ಲಿ ಹೋಗುತ್ತಿದ್ದಾಗ ಕಾರವಾರ ಬೈತಕೋಲ್ ಹತ್ತಿರ ಸುಲಿಗೆ ಮಾಡಿದ ಸ್ವತ್ತು ಹಾಗೂ ಉಳಿದ ಹಣದೊಂದಿಗೆ ರೈಲ್ವೇ ದಳದ ರಕ್ಷಣಾ ದಳದ ಅಧಿಕಾರಿಯವರಿಗೆ ಸಿಕ್ಕಿಬಿದ್ದಿದ್ದು, **ಭಾರತೀಯ ದಂಡ ಸಂಹಿತೆ ಕಲಂ.392** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿರುತ್ತೀರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರಶ್ನೆ1: ನಿಮ್ಮ ಮೇಲೆ ಹೊರಿಸಲಾದ ದೋಷಾರೋಪಣೆಗಳನ್ನು ಕೇಳಿದಿರಾ? ಅದು ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ ನೀವು ಸದರಿ ದೋಷಾರೋಪಣೆಗಳನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

*(ಸದರಿ ದೋಷಾರೋಪಣೆಗಳನ್ನು ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಓದಿ, ವಿವರಿಸಿ ಹೇಳಲಾಯಿತು. ಪ್ರಶ್ನೆಗಳನ್ನು ಸಹ ಆರೋಪಿ ಗೊತ್ತಿರುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ನನ್ನ ಸ್ವಹಸ್ತಾಕ್ಷರಗಳಿಂದ ಬರೆದುಕೊಳ್ಳಲಾಗಿರುತ್ತದೆ)*

ದಿನಾಂಕಃ 13–02–2023 **(ಕುರಣೆ ಕಾಂತ ಢಾಕು)**

ಸ್ಥಳಃ ಭಟ್ಕಳ **ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ ದಂಡಾಧಿಕಾರಿಗಳು, ಭಟ್ಕಳ.**